ನಾಗರಪಂಚಮಿ ಹಬ್ಬ ಮಾಡುತ್ತಿರಲಿಲ್ಲ. ಸಣ್ಣವರು ಮಠದ ಹಿಂದಿನ ದೊಡ್ಡ ಜಾಗದಲ್ಲಿ ಕಲ್ಲಿನ ನಾಗರಮೂರ್ತಿಗಳನ್ನು ತರಿಸಿ ನಿಲ್ಲಿಸಿ ನಾಗರ ಪಂಚಮಿಗೆ ಮಹಿಳೆಯರು, ಮಕ್ಕಳು ಬಂದು ಕಲ್ಲನಾಗರಗಳಿಗೆ ಹಾಲೆರೆದು ಪೂಜಿಸಿದರು. ಇದನ್ನು ಕೇಳಿ ಚಂದ್ರಕಾಂತಯ್ಯನಿಗೆ ಸುಮ್ಮನಿರಲು ಸಾಧ್ಯವಾಗಲಿಲ್ಲ. 'ಕಲ್ಲನಾಗರ ಕಂಡರೆ ಕೊಲ್ಲೆಂಬರು' ಎಂಬ ವಚನವನ್ನು ಕಪ್ಪು ಹಲಗೆ ಮ್ಯಾಲೆ ಬರೆದು ನಿಲ್ಲಿಸಿದ. ಓಣಿಯಲ್ಲಿ ಜನ ಓದಿ ಮಾತುಕತೆ ನಡೆಸಿದರು.

ಚಂದ್ರಕಾಂತಯ್ಯ ಮಠದ ಕಾರ್ಯಕ್ರಮಗಳನ್ನು ವಿರೋಧಿಸಿದರೂ ಸಣ್ಣವರು ಮುಖ್ಯ ಕಾರ್ಯಕ್ರಮ ಮಾಡುವುದಿದ್ದರೆ ಪೂರ್ವಭಾವಿ ಸಭೆಗೆ ಕರೆ ಕಳಿಸುತ್ತಿದ್ದರು. ಚಂದ್ರಕಾಂತಯ್ಯ ಹೋದರೆ ಹೋಗುತ್ತಿದ್ದ. ಇಲ್ಲ ಬಿಟ್ಟು ಬಿಡುತ್ತಿದ್ದ. ಆದರೆ ಊರುಕೇರಿ ವಿದ್ಯಮಾನಗಳನ್ನು ಗಮನಿಸಿ ಕೇಡಾಗುವ ವಿಷಯಗಳಾಗಿದ್ದರೆ ಕಪ್ಪು ಹಲಗೆ ಮ್ಯಾಲೆ ಬರೆಯುತ್ತಿದ್ದ. ಈಗ ಊರು ಬೆಳೆದಿತ್ತು. ಅಭಿವೃದ್ಧಿಯಾಗುತ್ತಿತ್ತು.



'ಶಾಲಾ ಕಾಲೇಜುಗಳಲ್ಲಿ ಹುಡುಗಿಯರಿಗೆ ಕಲಿಸುವವರಿಂದಲೇ ಲೈಂಗಿಕ ಕಿರುಕುಳ', 'ಅನಧಿಕೃತ ಉಸುಕು ದಂಧೆ ಹಿರೇಹಳ್ಳದಲ್ಲಿ', 'ಪಾಳುಬಿದ್ದ ಗರಡಿ ಮನೆಯಲ್ಲಿ ಜೂಜಾಟ', 'ಸಾಮೂಹಿಕ ವಿವಾಹಗಳಲ್ಲಿ ಮಂತ್ರಿಗಳ ಸಮ್ಮುಖದಲ್ಲಿ ಮೂರು ಬಾಲ್ಯ ವಿವಾಹಗಳು' ಎಂಬ ಘೋಷಣೆಗಳನ್ನು ಕಪ್ಪು ಹಲಗೆ ಮ್ಯಾಲೆ ಆಗಾಗ ಬರೆಯುತ್ತಿದ್ದ. ಊರಲ್ಲಿ ಕುತೂಹಲ ಮೂಡಿಸಿತ್ತು. ಪತ್ರಕರ್ತರು ವಿಷಯ ಸಂಗ್ರಹಣೆಗೆ ಚಂದ್ರಕಾಂತಯ್ಯನನ್ನು ಕಾಣುವ ವಾತಾವರಣ ಸೃಷ್ಟಿಯಾಯಿತು. ಸ್ಥಳೀಯ ಪತ್ರಕರ್ತರು ರಾಜಕಾರಣಿಗಳ ಕಾರ್ಯಕ್ರಮಕ್ಕೆ ಮಾತ್ರ ಹಾಜರಾಗಿ, ಅವರಿಗೆ ಹಿತವೆನಿಸುವ ಸುದ್ದಿಗಳನ್ನು ಬರೆಯುತ್ತಿದ್ದರು.

ಜೂಜಾಟ, ಉಸುಕು ದಂಧೆ, ಬಾಲ್ಯ ವಿವಾಹಗಳ ವಿಷಯಗಳು ಸಂಬಂಧಿಸಿದವರಿಗೆ ಬಿಸಿ ಮುಟ್ಟಿಸಿದವು. ಅದರಿಂದ ಚಂದ್ರಕಾಂತಯ್ಯನಿಗೆ ಕೊಲೆ ಬೆದರಿಕೆ ಹಾಕತೊಡಗಿದರು. ಮಾಂತಮ್ಮನಿಗೆ ಕಿರಿಕಿಯಾಗತೊಡಗಿತು. ಪೋಲೀಸರು ಬಂದು ವಿಚಾರಿಸಿ ಹೋದ ಮ್ಯಾಲೆ ಹೆದರಿದಳು. ಚಂದ್ರಕಾಂತಯ್ಯ ಕೊಲೆ ಬೆದರಿಕೆ ಹಾಕಿದವರ ಮ್ಯಾಲೆ ಪೊಲೀಸ್ ಠಾಣೆಗೆ ಹೋಗಿ ಕಂಪ್ಲೇಂಟ್ ನೀಡಿ ಬಂದ. ಮಾಂತಮ್ಮ 'ಊರಿಗೆ ಅತ್ತು ಕಣ್ಣು ಕಳಕೊಳ್ಳಬೇಡಯ್ಯ' ಎಂದು ಹೇಳಿದಳು. ದಿನಗಳು ಕಳೆದವು. ಹೊಸ ಸರ್ಕಾರ ಬಂತು. ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ಮ್ಯಾಲೆ ಬಹಳ ಖುಷಿ ಪಟ್ಟ. ಆದರೆ ಅದೇ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸಿದ. ಶರಣರ ಕಾಯಕ-ದಾಸೋಹ ತತ್ವಗಳಿಗೆ ಸರ್ಕಾರದ ಗ್ಯಾರಂಟಿ ಯೋಜನೆಗಳು ಮಾರಕ- ಎಂದು ಕಪ್ಪುಹಲಗೆ ಮ್ಯಾಲೆ ಬರೆದುಬಿಟ್ಟ. ತನ್ನ ಹೆಂಡತಿಗೆ ಅವುಗಳಿಗೆ ಅರ್ಜಿ ಹಾಕದಂತೆ ತಡೆ ಹಿಡಿದಿದ್ದ. ಓಣಿ ಹೆಣ್ಣುಮಕ್ಕಳು ಚಂದ್ರಕಾಂತಯ್ಯನ ಗ್ಯಾರಂಟಿ ಯೋಜನೆಗಳ ವಿರೋಧವನ್ನು ನಿಂತಲ್ಲಿ, ಕುಂತಲ್ಲಿ ಚರ್ಚಿಸಿದರು. 'ಕೊಡವುರು ಕೊಡ್ತಾರ. ಬ್ಯಾಡನ್ನಲು ಈತ ಯಾರು?' ಎಂಬ ಮಾತುಗಳು ಮಾಂತಮ್ಮನ ಕಿವಿಗೆ ಬಿದ್ದವು. ನೊಂದುಕೊಂಡ ಮಾಂತಮ್ಮ ತಾನೇ ಕಪ್ಪು ಹಲಗೆ ಮ್ಯಾಲೆ ಬರೆದಳು:

**ಲೋಕದ ಡೊಂಕ ನೀವೇಕೆ ತಿದ್ದುವಿರಿ**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
**ನೆರೆ ಮನೆಯ ದುಃಖಕ್ಕೆ ಅಳುವವರ ಮೆಚ್ಚ**
**ಕೂಡಲಸಂಗಮದೇವ**

**- ಬಸವಣ್ಣ**